**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 50/2016**

**ಸಿಡಬ್ಲೂಃ16 ಪಿ ಡಬ್ಲ್ಯೂಃ15**

**ಹೆಸರುಃ ಯಲ್ಲಪ್ಪ**

**ತಂದೆ ಹೆಸರುಃ ದೇವಪ್ಪ ಸೋಮಣ್ಣವರ**

**ವಯಸ್ಸುಃ 57 ವರ್ಷಗಳು.**

**ಉದ್ಯೋಗಃ ವ್ಯವಸಾಯ**

**ವಾಸ ಸ್ಥಳಃ ಹಿರೇಬೂದಿಹಾಳ.**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ದಿಃ 21.02.2025**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾಃ1 ರಿಂದ 15, ಚಾಸಾಃ17 ರಿಂದ 36 ರವರು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿಗಳು ನನಗೆ ಗೊತ್ತಿಲ್ಲ, ನ್ಯಾಯಾಲಯದ ಮುಂದೆ ಈ ದಿನ 4 ಮತ್ತು 5 ನೇ ಆರೋಪಿಗಳು ಗೈರು ಹಾಜರಾಗಿದ್ದು, ಅವರ ಪರಿಚಯ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಎಲ್ಲಾ ಆರೋಪಿತರು ತಮ್ಮ ಅಧಿಕಾರಿದ ಅವಧಿಯಲ್ಲಿ ನರೇಗಾ ಯೋಜನೆಯಡಿಯಲ್ಲಿ ಸ್ವಲ್ಪ ಕೂಲಿ ಕಾರ್ಮಿಕರನ್ನು ತೆಗೆದುಕೊಂಡು ಬಹಳಷ್ಟು ನರೇಗಾ ಯೋಜನೆ ಪಟ್ಟಿಗಳಲ್ಲಿ ಕೂಲಿಕಾರರನ್ನು ನಮೂದಿಸಿದ್ದು ಹಾಗೂ ಅವರ ಖೊಟ್ಟಿ ಸಹಿಗಳನ್ನು ಮಾಡಿ ಅವರ ಖಾತೆಗೆ ಬಂದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ಸರಕಾರಕ್ಕೆ ಹಾಗೂ ಕೂಲಿಕಾರರಿಗೆ ಮೋಸ ಹಾಗೂ ನಂಬಿಕೆ ದ್ರೋಹವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

1. ಸುಮಾರು ನಾಲ್ಕು ಐದು ವರ್ಷಗಳಿಂದ ಇಂಗಳಗಿ ಗ್ರಾಮ ಪಂಚಾಯತ ನಮ್ಮ ಊರು ಮತ್ತು ಇಂಗಳಗಿ ಗ್ರಾಮ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿಕಾರರಿಂದ ಹೊಸದಾಗಿ ರಸ್ತೆ ಮಾಡಿಸುವುದು ಮತ್ತು ರೈತರ ಹೊಲದಲ್ಲಿ ಕೃಷಿ ಹೊಂಡ ಮತ್ತು ಬದುಗಳನ್ನು

ಹಾಕಿಸುವುದು, ಕೂಲಿಕಾರರಿಗೆ ಮತ್ತು ಕೂಲಿ ಹಣವನ್ನು ಅವರ ಬ್ಯಾಂಕುಗಳಲ್ಲಿ ಇದ್ದ ಉಳಿತಾಯ ಖಾತೆಗಳಿಗೆ ಜಮಾ ಮಾಡುವುದಾಗಿ ಪಂಚಾಯತ ನೌಕಾರರಾದ ಶಂಕ್ರಪ್ಪ ಸಂಗಣ್ಣನವರ ಮತ್ತು ಕಾರ್ಯದರ್ಶಿಯವರು ಹೇಳಿದ್ದರಿಂದ ಕೂಲಿಕಾರರ ಜನರಿಂದ ಬ್ಯಾಂಕಿನ ಪಾಸ್ ಬುಕ್ಕಗಳನ್ನು ಹಾಗೂ ನಂಬರಗಳನ್ನು ಕೊಟ್ಟು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು, ನನ್ನ ಹೆಂಡತಿ ಮತ್ತು ನನ್ನ ಮಗ ಮೂರು ಜನ ಹಿರೇಬೂದಿಹಾಳ ನೆಲಗುಡ್ಡ ಭೂಕೋಪ್ಪ ರಸ್ತೆ ಸುಧಾರಣಾ ಕೂಲಿ ಕೆಲಸಕ್ಕೆ ಕೂಲಿಯಂತೆ ಏಳು ದಿನ ಕೆಲಸಕ್ಕೆ ಹೋಗಿದ್ದೇವು ಎಂದರೆ ಸರಿಯಲ್ಲ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿಕಾರ ಕೆಲಸ ಮಾಡಿದ ಹಾಜರಾತಿ ಪಟ್ಟಿಯನ್ನು ನೋಡಲಾಗಿ ಅದರ ಸಂಃ61426 ಇದ್ದು, ಹಿರೇಬೂದಿಹಾಳದಿಂದ ನೆಲಗುಡ್ಡ ತರ್ಲಘಟ್ಟ ರಸ್ತೆ ಸುಧಾರಣಾ ಮಾಡಿರುವ ಬಗ್ಗೆ ಕೂಲಿ ಕೆಲಸಗಾರರ ಪಟ್ಟಿಯಲ್ಲಿ ಕೆಲಸ ಮಾಡಿದ ಬಗ್ಗೆ ಅ.ನಂಃ94 ಕ್ಕೆ ನನ್ನ ಹೆಸರು, ಅ.ನಂಃ95 ಕ್ಕೆ ನನ್ನ ಹೆಂಡತಿಯ ಹೆಸರು ಹಾಗೂ ಅ.ನಂಃ96 ಕ್ಕೆ ನನ್ನ ಮಗನ ಹೆಸರು ನಮೂದು ಮಾಡಿದ್ದು ಅದರ ಮುಂದೆ ಜಾಬ್ ಕಾರ್ಡ ನಂಃ156 ಅಂತ ಬರೆದು ಹಾಗೂ ಪ್ರತಿಯೊಬ್ಬರ ಮುಂದೆ ಕೂಲಿ ಹಣ 700/ ತೋರಿಸಿದ್ದು ಮತ್ತು ಅದು ನಮಗೆ ಮುಟ್ಟಿದೆ ಅಂತ ಹೆಬ್ಬಟ್ಟಿನ ಸಹಿ ಮಾಡಲಾಗಿತ್ತು ಈ ಹೆಬ್ಬಟ್ಟಿನ ಗುರುತಗಳನ್ನು ನಾವು ಮಾಡಿರುವುದಿಲ್ಲ ಹಾಗೂ ಅವು ಖೊಟ್ಟಿಯಾಗಿರುತ್ತವೆ ಎಂದರೆ ಸರಿಯಲ್ಲ. ಕೂಲಿಕಾರರ ಪಟ್ಟಿಯಲ್ಲಿ ಹಣವನ್ನು ಚೆಕ್ಕ ಮುಖಾಂತರ ನನ್ನ ಹಾಗೂ ಇನ್ನುಳಿದ 14 ಜನರ ಹೆಸರುಗಳ ಖಾತೆಗಳಿಗೆ ಚೆಕ್ಕ ನಂಃ ಚೆಕ್ಕ ನಂಃ172559 ದಿಃ24.02.2010 ಮೊತ್ತ 1,53,944/ ರೂಪಾಯಿ ಇದ್ದು ಈ ಹಣವನ್ನು ಜಮಾ ಮಾಡಬೇಕು ಅಂತ ಬ್ಯಾಂಕಿಗೆ ಕೊಟ್ಟ ಲಿಸ್ಟನಲ್ಲಿ ನೋಡಿದ್ದು ಅದರಲ್ಲಿ ಅ.ನಂಃ8 ಕ್ಕೆ ನನ್ನ ಹೆಸರು ನಮೂದಿಸಿ ಹೆಸರಿನ ಮುಂದೆ ನನ್ನ ಬ್ಯಾಂಕ ಉಳಿತಾಯ ಖಾತೆ ನಂಬರ ನಮೂದಿಸಿ ರೂಪಾಯ 10,260/ ಜಮಾ ಮಾಡಲು ಬರೆಯುವುದಾಗಿ ಅಧ್ಯಕ್ಷರಾದ ಆರೋಪಿ ನೀಲವ್ವ ಭಧ್ರಾಪುರ ಹಾಗೂ ಎಮ್ ಎ ನದಾಫ ಇವರುಗಳ ಸಹಿ ಇರುತ್ತದೆ ಎಂದರೆ ಸರಿಯಲ್ಲ. ನಂತರ ನನ್ನ ಮತ್ತು ನನ್ನ ಹೆಂಡತಿ ಮತ್ತು ಮಗನ ಇವರ ಬ್ಯಾಂಕಿನ ಉಳಿತಾಯ ಖಾತೆಯಲ್ಲಿ ಬೇರೆ ಕೂಲಿಕಾರರ ಕೂಲಿ ಹಣವನ್ನು ಜಮಾ ಮಾಡಲಾಗಿ ನಮ್ಮ ಬಾಬ್ತು ಕೂಲಿ ಹಣ 10,260/ರಲ್ಲಿ ನಮ್ಮ ಕೂಲಿ ಹಣವಾದ ರೂ 2,100/- ಮುರಿದುಕೊಂಡು ಬಾಕಿ ಉಳಿದ ಕೂಲಿಕಾರ್ಮಿಕರಿಗೆ ಬಟವಡೆ ಮಾಡಲು ಕೊಡ್ರಿ ಅಂತ ಕಾರ್ಯದರ್ಶಿ ಇವರ ಹೇಳಿದ ಪ್ರಕಾರ ನಾನು ದಿಃ25.02.2010 ರಂದು ರೂ 10,260/ ರೂಗಳನ್ನು ಬ್ಯಾಂಕಿನಿಂದ ಪಡೆದು ನಮ್ಮ ಕೂಲಿ ಹಣ ರೂ 2100/ ಮುರಿದುಕೊಂಡು ಇನ್ನುಳಿದ ರೂ

8,160/ ರೂಪಾಯಿಗಳನ್ನು ಪಂಚಾಯತ ಕ್ಲರ್ಕ ಶಂಕ್ರಪ್ಪ ಸಂಗಣ್ಣನವರ ಇವರಿ ಕಡೆಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಪಾಸ್ ಬುಕ್ಕ ಪ್ರತಿಯಲ್ಲಿ ಸಹಿ ಮಾಡಿ, ಬಿಳಿ ಹಾಳೆಯಲ್ಲಿ ನನ್ನ ಹೆಬ್ಬಟ್ಟಿನ ಮಾದರಿ ಸಹಿಯನ್ನು ಮಾಡಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಎಮ್ ಎ ನದಾಫ ಕಾರ್ಯದರ್ಶಿ ಇವರು , ಕ್ಲರ್ಕ ಶಂಕ್ರಪ್ಪ ಹಾಗೂ ಅಧ್ಯಕ್ಷ್ಯರಾದ ನೀಲವ್ವ ಭದ್ರಾಪುರ ಇವರು ಮೀಲಾಪೆಯಾಗಿ ತಮ್ಮ ಸ್ವಂತ ಲಾಭಕ್ಕಾಗಿ ನನ್ನ ಖಾತೆಗೆ ಬೇರೆ ಕೂಲಿಕಾರರ ಹಣ ಜಮಾ ಮಾಡಿರುವುದಾಗಿ ಸುಳ್ಳು ಹೇಳಿ ನಂಬಿಸಿ ನಮ್ಮಿಂದ ರೂ 8,160/ ರೂಪಾಯಿಗಳನ್ನು ಪಡೆದುಕೊಂಡು ತಮ್ಮ ಸ್ವಂತಕ್ಕೆ ದುರುಪಯೋಗ ಮಾಡಿಕೊಂಡು ನನಗೆ ಮತ್ತು ಸರಕಾರಕ್ಕೆ ಹಾಗೂ ಕೂಲಿ ಕಾರ್ಮಿಕರಿಗೆ ಮೋಸ ಮತ್ತು ನಂಬಿಕೆ ದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಎಲ್ಲಾ ಸಂಗತಿಗಳು ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿಕೆಯನ್ನು ನಿಪಿಃ22 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**

**<u>ಸಿಸಿ ನಂಃ 50/2016</u>**

**<u>ಸಿಡಬ್ಲೂಃ17 ಪಿ ಡಬ್ಲ್ಯೂಃ16</u>**

**ಹೆಸರುಃ ಭೀಮಪ್ಪ**

**ತಂದೆ ಹೆಸರುಃ ಬಸಪ್ಪ ಮಾದರ**

**ವಯಸ್ಸುಃ 44 ವರ್ಷಗಳು.**

**ಉದ್ಯೋಗಃ ಕೂಲಿ ಕೆಲಸ**

**ವಾಸ ಸ್ಥಳಃ ಹಿರೇಬೂದಿಹಾಳ.**

**<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ದಿಃ 21.02.2025</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ಚಾಸಾಃ1 ರಿಂದ 7, 10, 13, 20, ರಿಂದ 36, ಪರಿಚಯ ಇರುವುದಿಲ್ಲ. ಚಾಸಾಃ8, 9, 11, 12, 14, 15, 16, 18, 19 ಪರಿಚಯ ಇರುತ್ತಾರೆ. ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿಗಳು ನನಗೆ ಗೊತ್ತಿಲ್ಲ, ನ್ಯಾಯಾಲಯದ ಮುಂದೆ ಈ ದಿನ 4 ಮತ್ತು 5 ನೇ ಆರೋಪಿಗಳು ಗೈರು ಹಾಜರಾಗಿದ್ದು, ಅವರ ಪರಿಚಯ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಎಲ್ಲಾ ಆರೋಪಿತರು ತಮ್ಮ ಅಧಿಕಾರಿದ ಅವಧಿಯಲ್ಲಿ ನರೇಗಾ ಯೋಜನೆಯಡಿಯಲ್ಲಿ ಸ್ವಲ್ಪ ಕೂಲಿ ಕಾರ್ಮಿಕರನ್ನು ತೆಗೆದುಕೊಂಡು ಬಹಳಷ್ಟು ನರೇಗಾ ಯೋಜನೆ ಪಟ್ಟಿಗಳಲ್ಲಿ ಕೂಲಿಕಾರರನ್ನು ನಮೂದಿಸಿದ್ದು ಹಾಗೂ ಅವರ ಖೊಟ್ಟಿ ಸಹಿಗಳನ್ನು ಮಾಡಿ ಅವರ ಖಾತೆಗೆ ಬಂದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ಸರಕಾರಕ್ಕೆ ಹಾಗೂ ಕೂಲಿಕಾರರಿಗೆ ಮೋಸ ಹಾಗೂ ನಂಬಿಕೆ ದ್ರೋಹವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ</u>**

1. ಸುಮಾರು ನಾಲ್ಕು ಐದು ವರ್ಷಗಳಿಂದ ಇಂಗಳಗಿ ಗ್ರಾಮ ಪಂಚಾಯತ ನಮ್ಮ ಊರು ಮತ್ತು ಇಂಗಳಗಿ ಗ್ರಾಮ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿಕಾರರಿಂದ ಹೊಸದಾಗಿ ರಸ್ತೆ ಮಾಡಿಸುವುದು ಮತ್ತು ರೈತರ ಹೊಲದಲ್ಲಿ ಕೃಷಿ ಹೊಂಡ ಮತ್ತು ಬದುಗಳನ್ನು ಹಾಕಿಸುವುದು, ಕೂಲಿಕಾರರಿಗೆ ಮತ್ತು ಕೂಲಿ ಹಣವನ್ನು ಅವರ ಬ್ಯಾಂಕುಗಳಲ್ಲಿ ಇದ್ದ

ಉಳಿತಾಯ ಖಾತೆಗಳಿಗೆ ಜಮಾ ಮಾಡುವುದಾಗಿ ಪಂಚಾಯತ ನೌಕಾರರಾದ ಶಂಕ್ರಪ್ಪ ಸಂಗಣ್ಣನವರ ಮತ್ತು ಕಾರ್ಯದರ್ಶಿಯವರು ಹೇಳಿದ್ದರಿಂದ ಕೂಲಿಕಾರರ ಜನರಿಂದ ಬ್ಯಾಂಕಿನ ಪಾಸ್ ಬುಕ್ಕಗಳನ್ನು ಹಾಗೂ ನಂಬರಗಳನ್ನು ಕೊಟ್ಟು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ತಂದೆ ಇಬ್ಬರು ಜನ ಹಿರೇಬೂದಿಹಾಳ ನೆಲಗುಡ್ಡ ಭೂಕೋಪ್ಪ ರಸ್ತೆ ಸುಧಾರಣಾ ಕೂಲಿ ಕೆಲಸಕ್ಕೆ ಕೂಲಿಯಂತೆ ಏಳು ದಿನ ಕೆಲಸಕ್ಕೆ ಹೋಗಿದ್ದೇವು ಎಂದರೆ ಸರಿಯಲ್ಲ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿಕಾರ ಕೆಲಸ ಮಾಡಿದ ಹಾಜರಾತಿ ಪಟ್ಟಿಯನ್ನು ನೋಡಲಾಗಿ ಅದರ ಸಂಃ61426 ಇದ್ದು, ಹಿರೇಬೂದಿಹಾಳದಿಂದ ನೆಲಗುಡ್ಡ ತರ್ಲಘಟ್ಟ ರಸ್ತೆ ಸುಧಾರಣಾ ಮಾಡಿರುವ ಬಗ್ಗೆ ಕೂಲಿ ಕೆಲಸಗಾರರ ಪಟ್ಟಿಯಲ್ಲಿ ಕೆಲಸ ಮಾಡಿದ ಬಗ್ಗೆ ಅ.ನಂಃ9 ಕ್ಕೆ ನನ್ನ ತಂದೆ ಹಸರು ಹಾಗೂ ಅ.ನಂಃ10 ಕ್ಕೆ ನನ್ನ ಹೆಸರು ನಮೂದು ಮಾಡಿದ್ದು, ಪ್ರತಿಯೊಬ್ಬರ ಮುಂದೆ ಕೂಲಿ ಹಣ 700/ ತೋರಿಸಿದ್ದು ಮತ್ತು ಅದು ನಮಗೆ ಮುಟ್ಟಿದೆ ಅಂತ ಸಹಿ ಮಾಡಲಾಗಿತ್ತು ಈ ಸಹಿಗಳು ನಮ್ಮದು ಇರುವುದಿಲ್ಲ ಹಾಗೂ ಅವು ಖೊಟ್ಟಿಯಾಗಿರುತ್ತವೆ ಎಂದರೆ ಸರಿಯಲ್ಲ. ಕೂಲಿಕಾರರ ಪಟ್ಟಿಯಲ್ಲಿ ಹಣವನ್ನು ಚೆಕ್ಕ ಮುಖಾಂತರ ನನ್ನ ಹಾಗೂ ಇನ್ನುಳಿದ 14 ಜನರ ಹೆಸರುಗಳ ಖಾತೆಗಳಿಗೆ ಚೆಕ್ಕ ನಂಃ ಚೆಕ್ಕ ನಂಃ172559 ದಿಃ24.02.2010 ಮೊತ್ತ 1,53,944/ ರೂಪಾಯಿ ಇದ್ದು ಈ ಹಣವನ್ನು ಜಮಾ ಮಾಡಬೇಕು ಅಂತ ಬ್ಯಾಂಕಿಗೆ ಕೊಟ್ಟ ಲಿಸ್ಟನಲ್ಲಿ ನೋಡಿದ್ದು ಅದರಲ್ಲಿ ಅ.ನಂಃ9 ಕ್ಕೆ ನನ್ನ ತಂದೆಯ ಹೆಸರು ಹಾಗೂ ಅನಂಃ10 ಕ್ಕೆ ನನ್ನ ಹೆಸರು ನಮೂದಿಸಿ ಹೆಸರಿನ ಮುಂದೆ ನನ್ನ ಬ್ಯಾಂಕ ಉಳಿತಾಯ ಖಾತೆ ನಂಬರ ನಮೂದಿಸಿ ರೂಪಾಯ 10,260/ ಜಮಾ ಮಾಡಲು ಬರೆಯುವುದಾಗಿ ಅಧ್ಯಕ್ಷರಾದ ಆರೋಪಿ ನೀಲವ್ವ ಭದ್ರಾಪುರ ಹಾಗೂ ಎಮ್ ಎ ನದಾಫ ಇವರುಗಳ ಸಹಿ ಇರುತ್ತದೆ ಎಂದರೆ ಸರಿಯಲ್ಲ. ನಂತರ ನನ್ನ ಮತ್ತು ನನ್ನ ತಂದೆಯ ಇವರ ಬ್ಯಾಂಕಿನ ಉಳಿತಾಯ ಖಾತೆಯಲ್ಲಿ ಬೇರೆ ಕೂಲಿಕಾರರ ಕೂಲಿ ಹಣವನ್ನು ಜಮಾ ಮಾಡಲಾಗಿ ನಮ್ಮ ಬಾಬ್ತು ಕೂಲಿ ಹಣ 10,260/ರಲ್ಲಿ ನಮ್ಮ ಕೂಲಿ ಹಣವಾದ ರೂ 1400/- ಮುರಿದುಕೊಂಡು ಬಾಕಿ ಉಳಿದ ಕೂಲಿಕಾರ್ಮಿಕರಿಗೆ ಬಟವಡೆ ಮಾಡಲು ಕೊಡ್ರಿ ಅಂತ ಕಾರ್ಯದರ್ಶಿ ಇವರ ಹೇಳಿದ ಪ್ರಕಾರ ನಾನು ದಿಃ25.02.2010 ರಂದು ರೂ 10,260/ ರೂಗಳನ್ನು ಬ್ಯಾಂಕಿನಿಂದ ಪಡೆದು ನಮ್ಮ ಕೂಲಿ ಹಣ ರೂ 2400/ ಮುರಿದುಕೊಂಡು ಇನ್ನುಳಿದ ರೂ 9560/ ರೂಪಾಯಿಗಳನ್ನು ಪಂಚಾಯತ ಕ್ಲರ್ಕ ಶಂಕ್ರಪ್ಪ ಸಂಗಣ್ಣನವರ

ಇವರಿ ಕಡೆಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಪಾಸ್ ಬುಕ್ಕ ಪ್ರತಿಯಲ್ಲಿ ಸಹಿ ಮಾಡಿ, ಬಿಳಿ ಹಾಳೆಯಲ್ಲಿ ನನ್ನ ಮಾದರಿ ಸಹಿಯನ್ನು ಮಾಡಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಎಮ್ ಎ ನದಾಫ ಕಾರ್ಯದರ್ಶಿ ಇವರು , ಕ್ಲರ್ಕ ಶಂಕ್ರಪ್ಪ ಹಾಗೂ ಅಧ್ಯಕ್ಷರಾದ ನೀಲವ್ವ ಭದ್ರಾಪುರ ಇವರು ಮೀಲಾಪೆಯಾಗಿ ತಮ್ಮ ಸ್ವಂತ ಲಾಭಕ್ಕಾಗಿ ನನ್ನ ಖಾತೆಗೆ ಬೇರೆ ಕೂಲಿಕಾರರ ಹಣ ಜಮಾ ಮಾಡಿರುವುದಾಗಿ ಸುಳ್ಳು ಹೇಳಿ ನಂಬಿಸಿ ನಮ್ಮಿಂದ ರೂ 9560/ ರೂಪಾಯಿಗಳನ್ನು ಪಡೆದುಕೊಂಡು ತಮ್ಮ ಸ್ವಂತಕ್ಕೆ ದುರುಪಯೋಗ ಮಾಡಿಕೊಂಡು ನನಗೆ ಮತ್ತು ಸರಕಾರಕ್ಕೆ ಹಾಗೂ ಕೂಲಿ ಕಾರ್ಮಿಕರಿಗೆ ಮೋಸ ಮತ್ತು ನಂಬಿಕೆ ದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಎಲ್ಲಾ ಸಂಗತಿಗಳು ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿಕೆಯನ್ನು ನಿಪಿಃ23 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**